ಅನುಭವ ನೀಡುತ್ತವೆ. ಅವರ ಸಾಹಿತ್ಯವನ್ನು ಅಕಡೆಮಿಕ್ ವಲಯವೂ ಒಪ್ಪಿಕೊಂಡಿದೆ. ಲೇಖಕಿ ಯಾವುದೇ ಕ್ಷೇತ್ರದಲ್ಲಿರಲಿ, ಅವರ ಸಾಹಿತ್ಯ ಮಹತ್ವದ್ದಾಗಿದ್ದರೆ ಅದನ್ನ ಯಾರೂ ನಿರಾಕರಿಸಲಿಕ್ಕೆ ಸಾಧ್ಯವಿಲ್ಲ. ಇನ್ನೂ ಹೆಚ್ಚಿನ ಉದಾಹರಣೆ ಹೇಳಬೇಕೆಂದರೆ ವಿಭಿನ್ನ ರೀತಿಯ ದೃಷ್ಟಿಕೋನದಿಂದ ಬರೆದ ಎಚ್.ವಿ. ಸಾವಿತ್ರಮ್ಮ, ತ್ರಿವೇಣಿ, ಹಾಗೂ ಡಾಕ್ಟರ್ ವೃತ್ತಿಯಲ್ಲಿದ್ದು ಅವಿಚ್ಛಿನ್ನವಾಗಿ ಬರೆದ ಡಾ. ಅನುಪಮಾ ನಿರಂಜನ ಹೀಗೆ ಪ್ರತಿಯೊಬ್ಬರೂ ಸೃಷ್ಟಿ ಮಾಡಿದ ಸಾಹಿತ್ಯ ವಿಶೇಷವಾದದ್ದು. ತಮ್ಮ ಅಸ್ಮಿತೆಯನ್ನು ಸಮರ್ಥವಾಗಿ ಬಳಸಿ ತಮ್ಮ ಆಲೋಚನೆಗಳನ್ನು, ಅನುಭವಗಳನ್ನು ಅಭಿವ್ಯಕ್ತಿಯ ಮೂಲಕ ಪ್ರತೀ ಲೇಖಕಿಯೂ ಕಟ್ಟಿ ಕೊಡುವ ಪ್ರಯತ್ನ ಮಾಡಿದ್ದಾರೆ. ಸಾವಿತ್ರಮ್ಮನವರಂತೂ ರಾಮಾಯಣದ ಪಾತ್ರಗಳನ್ನು ಮಹಿಳಾ ಕೇಂದ್ರಿತ ದೃಷ್ಟಿಯಿಂದ ಹಲವು ದಶಕಗಳ ಹಿಂದೆಯೇ ನೋಡಿದರು.

ಅವರಿಗೆ ಯಾವ ಓದು ಸಿದ್ಧಾಂತಗಳ ಬೆಂಬಲ ಈಗ ಇದ್ದ ಹಾಗೆ ಸುಲಭವಾಗಿ ದೊರೆಯುವಂತೆ ಇರಲಿಲ್ಲ. ಆದರೂ ಆಗಿನ ಕಾಲಕ್ಕೆ ಬರೆದು ಅವರು ನಮಗೆ ಒಂದು ಅಸ್ತಿವಾರವನ್ನು ಸದೃಢವಾಗಿ ಹಾಕಿಕೊಟ್ಟರು. ಬೇರೆಬೇರೆ ವೃತ್ತಿಯಿಂದ ಬಂದ ಗಂಡಸರೂ ಕೂಡ ಬರೆಯುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಅವರ ಅನುಭವಗಳು ಮತ್ತು ಅಭಿವ್ಯಕ್ತಿ ಸ್ವರೂಪಗಳು ಭಿನ್ನವಾಗುತ್ತಾ ಹೋಗಿವೆ. ಇದು ಸಾಹಿತ್ಯಕ್ಕೆ ಇತ್ಯಾತ್ಮಕವಾದ ಅಂಶವಾಗಿದೆ. ಆ ಮಾದರಿಯ ಬರಹಗಳನ್ನ ಅಕಡೆಮಿಕ್ ವಲಯ ಸ್ವಾಗತ ಮಾಡುತ್ತಾ ಇದೆ.

◆ **ಹೆಣ್ಣುಮಕ್ಕಳ ಭಾವಲೋಕ ಒಂದು ಕಡೆ. ಆದರೆ, ಅವರಿಗೆ ದೊರೆಯಬೇಕಾದ ಆರ್ಥಿಕ ಸಬಲತೆಯ ನಿರಾಕರಣೆ ಇನ್ನೊಂದು ಕಡೆ. ಒಂದು ಪಕ್ಷ ಆರ್ಥಿಕ ಸಬಲತೆ ದಕ್ಕಿದರೆ ಸಮಸ್ಯೆಗಳಿಗೆ ಪರಿಹಾರ ಸಿಗಬಹುದಾ?**

ಇದನ್ನ ನಾವು ಆಗಾಗ ಚರ್ಚೆ ಮಾಡುತ್ತಲೇ ಇದ್ದೀವಿ. ಆದರೆ, ನನಗೆ ಅನ್ನಿಸುವ ಪ್ರಕಾರ ಆರ್ಥಿಕ ದೌರ್ಬಲ್ಯ ಮಾತ್ರ ಮಹಿಳೆಯರು ಎದುರಿಸುವ ಸಮಸ್ಯೆಗಳಿಗೆ ಕಾರಣ ಎಂದರೆ ಅವರ ಸಮಸ್ಯೆಗಳನ್ನು ಬಹಳ ಸರಳವಾಗಿ ನೋಡಿದ ಹಾಗೆ ಆಗುತ್ತೆ. ಇದು ತಪ್ಪು. ಆರ್ಥಿಕ ಸಬಲತೆ ಅವಶ್ಯಕ ಹೌದು, ಆದರೆ ಅದು ಸಕಲ ಸಮಸ್ಯೆಗಳಿಗೂ ಇರುವ ಏಕೈಕ ಪರಿಹಾರವಲ್ಲ. ದುಡಿದ ಹಣವನ್ನು ತಮಗೆ ಬೇಕಾದ ಹಾಗೆ ವ್ಯಯಮಾಡುವ ಸ್ವಾತಂತ್ರ್ಯ ಮಹಿಳೆಯರಿಗೆ ಇದೆಯಾ ಎಂಬ ಪ್ರಶ್ನೆಯೂ ಸಹ ಮುಖ್ಯವಾಗುತ್ತದೆ. ಆದರೆ, ಆರ್ಥಿಕತೆ ತನ್ನ ಕಾಲ ಮೇಲೆ ತಾನು ನಿಲ್ಲಬಲ್ಲ ಬಲವನ್ನಂತೂ ನೀಡುತ್ತದೆ.


**ಪ್ರೀತಿ ನಾಗರಾಜ**

ವೃತ್ತಿಯಿಂದ ಪತ್ರಕರ್ತೆ. ದಾವಣಗೆರೆಯವರು. ಪ್ರಸ್ತುತ ಮೈಸೂರಿನ ನಿವಾಸಿ. ಪತ್ರಿಕೋದ್ಯಮ, ಮನಃಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, 'ಡೆಕ್ಕನ್ ಹೆರಾಲ್ಡ್', 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗಳಲ್ಲಿ, 'ಸಿಎನ್‌ಬಿಸಿ' ಟೀವಿ ಚಾನೆಲ್‌ನಲ್ಲಿ ಕೆಲಸ ಮಾಡಿರುವ ಅನುಭವಿ. ರಂಗಭೂಮಿ ಮತ್ತು ಸಿನಿಮಾರಂಗದ ಪ್ರಸಿದ್ಧ ಅಭಿನೇತ್ರಿ ಬಿ. ಜಯಶ್ರೀ ಅವರ ಆತ್ಮಕತೆ 'ಕಣ್ಣಾ ಮುಚ್ಚೇ... ಕಾಡೇ ಗೂಡೇ...'ಯ ನಿರೂಪಕಿ. 'ಪ್ರಜಾವಾಣಿ' ಪತ್ರಿಕೆಯ 'ಕಾಮನಬಿಲ್ಲು' ಪುರವಣಿಯಲ್ಲಿ ಪ್ರಕಟಗೊಂಡ 'ಮಿರ್ಚಿ ಮಂಡಕ್ಕಿ' ಅಂಕಣ ಅದೇ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟಗೊಂಡಿದೆ.